**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ .2288/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - ದೀಪಿಕಾ | | **ಚಾ.ಸಾ.-1** |
| **ತಂದೆಯ ಹೆಸರು** | - ದುರ್ಗೇಶ್ ಪ್ರಸಾದ್ | | **ಫ್ರಾ.ಸಾ.-1** |
| **ವಯಸ್ಸು** | - 37 ವರ್ಷ | | |
| **ಉದ್ಯೋಗ** | - ಶಿಕ್ಷಕಿ | | |
| **ವಾಸಸ್ಥಳ** | - ಮದ್ದೂರು | | |

ದಿನಾಂಕಃ 03-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ಚಾ.ಸಾ. 2 ನನ್ನ ತಮ್ಮ, ಚಾ.ಸಾ. 3 ನನ್ನ ತಾಯಿ, ಚಾಸಾ 4 ನನ್ನ ಅಜ್ಜಿ, ಚಾ.ಸಾ. 5 ರಿಂದ 9 ರವರ ಪರಿಚಯವಿರುತ್ತದೆ. ಆರೋಪಿ-1 ನನ್ನ ಗಂಡ, ಆರೋಪಿ-2 ನನ್ನ ಗಂಡನ ಸಂಬಂಧಿಕರು. 2007 ರಲ್ಲಿ ನನ್ನ ಮತ್ತು ಆರೋಪಿ-1 ರವರ ಮದುವೆ ನಡೆದಿರುತ್ತದೆ. ನಮಗೆ ಇಬ್ಬರು ಗಂಡುಮಕ್ಕಳು ಇದ್ದು, ಕೌಟಂಬಿಕ ಕಲಹದ ಕಾರಣ ನಾವಿಬ್ಬರೂ ಪ್ರತ್ಯೇಕವಾಗಿ ವಾಸವಾಗಿರುತ್ತೇವೆ. ನನ್ನ ಮೊದಲನೇ ಮಗ ಆರೋಪಿ-1 ರವರ ಜೊತೆ ವಾಸ ಮಾಡುತ್ತಿದ್ದು ನನ್ನ 2 ನೇ ಮಗ ನನ್ನ ಬಳಿ ಇರುತ್ತಾರೆ. ಆರೋಪಿ-1 ರವರು ನನ್ನ ಬಳಿಯಿರುವ 2 ನೇ ಮಗನನ್ನು ತನ್ನ ವಶಕ್ಕೆ ನೀಡಲು ಕೋರಿ ಹೊಸಕೋಟೆಯ ಹಿರಿಯ ಶ್ರೇಣಿಯ ನ್ಯಾಯಾಧೀಶರ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಸದರಿ ಪ್ರಕರಣದ ಸಂಖ್ಯೆ ಜಿ ಅಂಡ್ ಡಬ್ಲೂ ಸಿ 37/2023 ರಂತೆ ಪ್ರಕರಣ ದಾಖಲಿಸಿದ್ದು ಸದರಿ ಪ್ರಕರಣದಲ್ಲಿ ಮಧ್ಯಂತರ ಆದೇಶವನ್ನು ಹೊರಡಿಸಿದ್ದು 1 ತಿಂಗಳ ಒಳಗಾಗಿ ನನ್ನ ಮಗುವನ್ನು ಆರೋಪಿ-1 ರವರ ಸುರ್ಪಧಿಗೆ ವಹಿಸಲು ಕಾಲಾವಕಾಶ ನೀಡಿ ದಿಃ 13-09-2023 ರಂದು ಆದೇಶವನ್ನು ನೀಡಿರುತ್ತಾರೆ. ಸದರಿ ಆದೇಶದ ವಿರುದ್ಧ ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಫೀಲನ್ನು ದಾಖಲಿಸಿರುತ್ತೇನೆ. ದಿಃ 23-09-2023 ರಂದು ರಾತ್ರಿ 08-20 ಗಂಟೆ ಸಮಯದಲ್ಲಿ ಆರೋಪಿ-1 ಮತ್ತು 2 ರವರು ಮದ್ದೂರಿನ ನಮ್ಮ ಮನೆಯ ಬಳಿ ಬಂದು, ನಮ್ಮ ಮನೆಗೆ ಅತಿಕ್ರಮ ಪ್ರವೇಶ ಮಾಡಿ, ನನ್ನ ಮಗುವನ್ನು ವಶಕ್ಕೆ ನೀಡಲು,

ಕೇಳಿರುತ್ತಾರೆ. ಹಾಗೂ ನಾನು ನಿರಾಕರಿಸಿದ್ದು, ಆಗ ಮನೆಯಲ್ಲಿದ್ದ ನನ್ನ ಮೇಲೆ, ಚಾಸಾ-2 ರಿಂದ 4 ರವರ ಮೇಲೆ ಜಗಳ ತೆಗೆದು ಅವಾಚ್ಯ ಶಬ್ಧಗಳಿಂದ ನಿಂದಿಸಿ ಗಲಾಟೆ ಮಾಡಿರುತ್ತಾರೆ ನಂತರ ಆರೋಪಿ-1 ರವರು ನನ್ನ ತಾಯಿ ಚಾಸಾ-3 ರವರ ಸೀರೆಯನ್ನು ಹಿಡಿದು ಎಳೆದಾಡಿ ಅವರ ಗೌರವಕ್ಕೆ ಧಕ್ಕೆಯುಂಟಾಗುವಂತೆ ನಡೆದುಕೊಂಡಿರುತ್ತಾರೆ. ಸದರಿ ಗಲಾಟೆಯ ಸಮಯದಲ್ಲಿ ಚಾಸಾ-3 ರವರಿಗೆ ಸಣ್ಣಪುಟ್ಟ ಗಾಯಗಳಾಗಿರುತ್ತವೆ. ಆ ಸಮಯದಲ್ಲಿ ನನ್ನ ತಮ್ಮ ಚಾಸಾ-2 ರವರು ಜಗಳ ಬಿಡಿಸಲು ಬಂದಿದ್ದು ಆರೋಪಿ-1 ರವರು ಅಲ್ಲಿಯೇ ಬಿದ್ದಿದ್ದ ಒಂದು ಕೋಲನ್ನು ತೆಗೆದುಕೊಂಡು ಚಾಸಾ-2 ರವರ ಹಲ್ಲೆ ಮಾಡಿರುತ್ತಾರೆ. ಆಗ ಗಲಾಟೆ ಶಬ್ಧ ಕೇಳಿ ಅಕ್ಕಪಕ್ಕದ ಮನೆಯವರು ಬಂದು ಜಗಳವನ್ನು ಬಿಡಿಸಿ ಸಮಾಧಾನಪಡಿಸಿರುತ್ತಾರೆ. ಚಾಸಾ-5 ರಿಂದ 7 ರವರು ಜಗಳ ಬಿಡಿಸಿರುತ್ತಾರೆ. ಆಗ ಆರೋಪಿತರು ನನ್ನ ವಿರುದ್ಧ ಮತ್ತು ಚಾಸಾ-2 ರಿಂದ 4 ರವರ ವಿರುದ್ಧ ಕೊಲೆ ಬೆದರಿಕೆ ಹಾಕಿರುತ್ತಾರೆ. ಸದರಿ ಗಲಾಟೆಯಲ್ಲಿ ನನಗೆ ಚಾಸಾ-2 ರಿಂದ 4 ರವರಿಗೆ ಮೂಗೇಟುಗಳಾಗಿದ್ದು ಯಾವುದೇ ಚಿಕಿತ್ಸೆ ಪಡೆಯುವಂತಹ ಪೆಟ್ಟಾಗಳಾಗಿರುವುದಿಲ್ಲ. ನಂತರ ನಾನು ನಮ್ಮ ವಕೀಲರನ್ನು ಭೇಟಿ ಮಾಡಿ ಅವರ ಸಲಹೆ ಪಡೆದು, ಸದರಿ ಘಟನೆಯಿಂದ ಸುಧಾರಿಸಿಕೊಂಡು ಮಾರನೇ ದಿನ ಮದ್ದೂರು ಠಾಣೆಗೆ ದೂರನ್ನು ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ, ಸದರೀ ದಾಖಲೆ ದೂರಾಗಿದ್ದು, ಅದನ್ನು ನಿ,ಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 1 ಎ ಎಂದು ಗುರುತಿಸಲಾಯಿತು. ನಾನು ದೂರು ನೀಡಿದ ನಂತರ ಮಾರನೇ ದಿನ 25-09-2023 ರಂದು ಘಟನಾ ಸ್ಥಳದಲ್ಲಿ ಮಧ್ಯಾಹ್ನ 02-30 ರಿಂದ 03-30 ರವರೆಗೆ ಪೊಲೀಸರು ಚಾಸಾ-8 ಮತ್ತು 9 ರವರ ಸಮಕ್ಷಮ ಪೊಲೀಸರು ಮಹಜರ್ ಕ್ರಮ ಜರುಗಿಸಿರುತ್ತಾರೆ. ಸದರಿ ಮಹಜರ್ ಗೆ ನಾನು ಚಾಸಾ-8 ಮತ್ತು 9 ರವರು ಸಹಿ ಮಾಡಿರುತ್ತೇವೆ. ಸದರಿ ಸಮಯದಲ್ಲಿ ಆರೋಪಿತರು ಹಲ್ಲೆಗೆ ಉಪಯೋಗಿಸಿದ ಒಂದು ಕೋಲು ಚಾಸಾ-3 ರವರ ಹಸಿರು ಬಣ್ಣದ ಸೀರೆಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಅದೇ ದಿನ ನಾನು ದೂರು ನೀಡುವ ಸಂದರ್ಭದಲ್ಲಿ ಪ್ರತ್ಯಕ್ಷ ಸಾಕ್ಷಿದಾರರ ಬಗ್ಗೆ ನಮೂದಿಸಿ ದ ಬಗ್ಗೆ ನನ್ನ ಮುಂದುವರೆದ ಹೇಳಿಕೆಯಲ್ಲಿ ಹೇಳಿರುತ್ತೇನೆ. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರೀ ದಾಖಲೆ ಸ್ಥಳ ಮಹಜರ್ ಆಗಿದ್ದು, ಅದನ್ನು ನಿ.ಪಿ. 2 ಎಂದು,

ಸಾಕ್ಷಿಯ ಸಹಿಯನ್ನು ನಿ.ಪಿ. 2 ಎ ಎಂದು ಗುರುತಿಸಲಾಯಿತು. ಆರೋಪಿ ಗೈರುಹಾಜರಿದ್ದು ಆರೋಪಿ ಪರ ವಕೀಲರು ಗುರುತಿಸಲು ತಕರಾರು ಇಲ್ಲ ತಿಳಿಸಿರುತ್ತಾರೆ.

**ಮುಂದುವರೆದ ಮುಖ್ಯವಿಚಾರಣೆಗಾಗಿ ಸಮಯಾವಕಾಶ ಕೋರಿದ್ದು ನೀಡಲಾಯಿತು.**
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ ಮತ್ತು ಜೆ ಎಂ ಎಫ್ ಸಿ , ಮದ್ದೂರು.